# ಶಾರ್ಕ್ ಮೀನಿನ ದುರಂತ ಕಥೆ

**ಸ್ವಾಮಿ ವಿವೇಕಾನಂದರು ಎಲ್ಲ ಸಾಹಿತ್ಯದ ಪ್ರಕಾರಗಳಲ್ಲೂ ಸಿದ್ಧಹಸ್ತರಾಗಿದ್ದರೆಂಬುದನ್ನು ನಿರೂಪಿಸಿರುವ ಎರಡು ಲೇಖನಗಳು ಈ ಸಂಚಿಕೆಯಲ್ಲಿವೆ. ಸ್ವಾಮಿ ವಿವೇಕಾನಂದರ ಸಂವಹನ ಪ್ರತಿಭೆ ಅವರ ಎಲ್ಲ ಬರಹಗಳಲ್ಲೂ ಮಿಂಚುತ್ತದೆ. ತಮ್ಮ ಹಡಗಿನ ಪ್ರವಾಸದ ಅವಧಿಯಲ್ಲಿ ಒಂದು ದಿನ ಶಾರ್ಕ್ ಎಂಬ ಭೀಮಮತ್ಸ್ಯವನ್ನು ಹಿಡಿಯುವ ತಮ್ಮ ಸಹಪ್ರಯಾಣಿಕರ ಪ್ರಯಾಸ ಹಾಗೂ ಗಡಿಬಿಡಿಯನ್ನು ಮತ್ತು ಆ ದುರದೃಷ್ಟ ಮೀನಿನ ಪೇಚಾಟವನ್ನು ಕಣ್ಣಿಗೆ ಕಟ್ಟುವಂತೆ ಅತ್ಯಂತ ವಿನೋದಪೂರ್ಣವಾಗಿ ವರ್ಣಿಸಿರುವ ಗದ್ಯದ ಮಾದರಿಯೊಂದು ಇಲ್ಲಿದೆ.**

...**ಬೆ**ಳಗ್ಗೆ ತಿಂಡಿಗೆ ಮುಂಚೆಯೇ, ಜಹಜಿನ ಹಿಂದೆ ದೊಡ್ಡ ಶಾರ್ಕ್‌ಗಳು ಸಂಚರಿಸುತ್ತಿವೆ ಎಂದು ತಿಳಿಯಿತು. ಬದುಕಿರುವ ಶಾರ್ಕನ್ನು ನಾನು ಇದುವರೆವಿಗೂ ನೋಡಿರಲಿಲ್ಲ. ಕಳೆದ ಸಲ ನಾನು ಬಂದಾಗ ಸೂಯೆಜ್ ಬಂದರಿನಲ್ಲಿ ಎಲ್ಲೋ ಸ್ವಲ್ಪ ಹೊತ್ತು ಮಾತ್ರ ಹಡಗು ನಿಂತಿತ್ತು. ಅದೂ ನಗರದ ಸಮೀಪದಲ್ಲಿ. ಶಾರ್ಕಿನ ಸುದ್ದಿ ಕೇಳಿದೊಡನೆಯೇ ಅದನ್ನು ನೋಡಲು ಓಡಿದೆವು. ಎರಡನೆ ದರ್ಜೆ ಹಡಗಿನ ಹಿಂಭಾಗದಲ್ಲಿತ್ತು. ಅದರ ಮೇಲೆ ಗಂಡಸರು, ಹೆಂಗಸರು, ಶಾರ್ಕ್ ನೋಡಲು ಕಟಕಟೆಯ ಮೇಲೆ ಬಾಗಿ ನಿಂತಿದ್ದರು. ಆದರೆ ನಮ್ಮ ಗೆಳೆಯ ಶಾರ್ಕ್‌ಗಳು ನಾನು ನೋಡುವುದಕ್ಕೆ ಹೋಗುವಷ್ಟರಲ್ಲಿ ಬೇರೆ ಕಡೆಗೆ ಹೋಗಿದ್ದವು. ನಮ್ಮ ಉತ್ಸಾಹ ಭಂಗವಾಯಿತು.... ಅರ್ಧಗಂಟೆಯಾಯಿತು—ಮುಕ್ಕಾಲು ಗಂಟೆಯೂ ಆಯಿತು. ನಮಗೆ ಬೇಜಾರಾಯಿತು. ಆಗ "ಅಗೋ ಅಲ್ಲಿ ಅದು ಬರುತ್ತಿದೆ" ಎಂದು ಸುಮಾರು ಒಂದು ಡಜನ್ ಜನ ಕಿರಿಚಿಕೊಂಡರು. ದೂರದಲ್ಲಿ ನೋಡುವಾಗ ದೊಡ್ಡದೊಂದು ಕಪ್ಪುಪ್ರಾಣಿ ನೀರಿನಲ್ಲಿ ಆರೇಳು ಅಂಗುಲ ಕೆಳಗೆ ನಮ್ಮ ಕಡೆ ಸಂಚರಿಸುತ್ತಿದ್ದುದು ಕಂಡಿತು. ಕ್ರಮೇಣ ಅದು ಹತ್ತಿರ ಹತ್ತಿರ ಬಂದಿತು. ದೊಡ್ಡ ಚಪ್ಪಟೆ ತಲೆ ಕಂಡಿತು. ಅದು ಚಲಿಸುತ್ತಿತ್ತು. ಬೋನಿಟೊ (ಒಂದು ವಿಧದ ಮೀನು) ವೇಗ ಅದರಲ್ಲಿ ಇರಲಿಲ್ಲ. ಆದರೆ ಒಂದು ಸಲ ಕತ್ತು ತಿರುಗಿಸಿದೊಡನೆಯೆ ನೀರಿನಲ್ಲಿ ಒಂದು ಸುಳಿ ಏಳುವುದು. ಭೀಮಾಕಾರದ ಮೀನು. ಗಂಭೀರವಾಗಿ ಮುಂದೆ ಸಾಗುತ್ತಿತ್ತು. ಅದರ ಮುಂದೆ ಒಂದೆರಡು ಸಣ್ಣ ಮೀನಿವೆ; ಅದರ ಬೆನ್ನು ಮತ್ತು ದೇಹದ ಮೇಲೆ ಕಿರಿಮೀನುಗಳು ಆಡುತ್ತಿವೆ. ಕೆಲವು ಅದರ ಕತ್ತನ್ನು ಹಿಡಿದುಕೊಂಡಿವೆ. ಸಾಮಂತರು ಮತ್ತು ಅನುಯಾಯಿಗಳಿಂದ ಕೂಡಿದ ಶಾರ್ಕ್ ಅದು. ಅದರ ಮುಂದೆ ಬರುತ್ತಿರುವ ಮೀನಿಗೆ ಪೈಲಟ್‌ಮೀನು ಎಂದು ಹೆಸರು. ಅದರ ಕರ್ತವ್ಯ, ಶಾರ್ಕಿಗೆ ಆಹಾರ ತೋರಿಸುವುದು. ಒಂದೆರಡು ಚೂರು ಮಾಂಸ ಇದಕ್ಕೆ ಬಹುಮಾನವಾಗಿ ಬಹುಶಃ ಸಿಕ್ಕುವುದು. ಆದರೆ ಶಾರ್ಕಿನ ಭಯಾನಕ ದವಡೆಯನ್ನು ನೋಡಿದರೆ ಮಿಕ್ಕ ಮೀನಿಗೆ ಏನಾದರೂ ಸಿಕ್ಕುವುದೆ ಎಂಬ ಸಂದೇಹ ಬರುವುದು. ಶಾರ್ಕಿನ ಸುತ್ತ ಮೈಮೇಲೆಲ್ಲ ಸಂಚರಿಸುತ್ತಿರುವ ಕಿರಿಯ ಮೀನನ್ನು "ಸಕರ್ಸ್" ಎನ್ನುವರು. ಅವುಗಳ ಕುತ್ತಿಗೆಯ ಹತ್ತಿರ ಕೆಂಪಗೆ ಮೋಟಾದ ಎರಡು ಇಂಚು ಉದ್ದ ನಾಲ್ಕು ಇಂಚು ಅಗಲವಿರುವ ಭಾಗವಿದೆ, ಇಂಗ್ಲಿಷ್ ಬೂಟ್ಸಿನ ಕೆಳಭಾಗದ ರಬ್ಬರ್‌ನಂತೆ ಇದೆ. ಈ ಭಾಗವನ್ನು ಶಾರ್ಕಿನ ದೇಹಕ್ಕೆ ತಾಕಿಸಿ ಅದರಿಂದ ಹಿಡಿದುಕೊಳ್ಳುವುವು. ಇದರಿಂದ ಅವು ಶಾರ್ಕಿನ ದೇಹ ಮತ್ತು ಬೆನ್ನಿನ ಮೇಲೆ ಸವಾರಿ ಮಾಡುವಂತೆ ಕಾಣುವುದು. ಶಾರ್ಕ್ ದೇಹದ ಮೇಲೆ ಇರುವ ಕ್ರಿಮಿಕೀಟಗಳನ್ನು ತಿಂದು ಇವು ಜೀವಿಸುವುವು. ಶಾರ್ಕಿಗೆ ಈ ಎರಡು ಬಗೆ ಪರಿಚಾರಕರು ಯಾವಾಗಲೂ ಇರಬೇಕು. ಅವರಿಗೆ ಅದು ಎಂದಿಗೂ ತೊಂದರೆ ಕೊಡುವುದಿಲ್ಲ. ಅವನ್ನು ತನ್ನ ಸ್ನೇಹಿತರು, ಅನುಯಾಯಿಗಳೆಂದು ಭಾವಿಸುವುದು.

ಎರಡನೆ ದರ್ಜೆ ಪ್ರಯಾಣಿಕರಿಗೆ ಸಾಹಸ ಉಕ್ಕೇರಿತು. ಅದರಲ್ಲಿ ಒಬ್ಬ ಮಿಲಿಟರಿಗೆ ಸೇರಿದವನು. ಅವನ ಉತ್ಸಾಹಕ್ಕೆ ಕೊನೆಯೇ ಇಲ್ಲ. ಹಡಗನ್ನೆಲ್ಲಾ ಹುಡುಕಿ ಒಂದು ಭೀಕರ ಗಾಳವನ್ನು ತಂದನು. ಅದು ಬಂಗಾಳ ದೇಶದಲ್ಲಿ ಬಾವಿಗೆ ಬಿದ್ದ ಬಿಂದಿಗೆ ತೆಗೆಯುವ ಪಾತಾಳ ಗರಡಿಗಿಂತ ದೊಡ್ಡದಾಗಿತ್ತು. ಇದಕ್ಕೆ ಎರಡು ಪೌಂಡು ಮಾಂಸವನ್ನು ಒಂದು ಬಲವಾದ ದಾರದಿಂದ ಕಟ್ಟಿದರು. ಗಾಳಕ್ಕೆ ಬಲವಾದೊಂದು ಹಗ್ಗವನ್ನು ಕಟ್ಟಿದರು. ಗಾಳಕ್ಕೆ ಆರು ಅಡಿ ಮೇಲೆ ದೊಡ್ಡದೊಂದು ತೊಲೆಯನ್ನು ನೀರಿನ ಮೇಲೆ ತೇಲುವುದಕ್ಕೆ ಕಟ್ಟಿದರು. ಅವನ್ನು ಸಮುದ್ರಕ್ಕೆ ಬಿಟ್ಟರು. ನಾವು ಉತ್ಸಾಹದಿಂದ ಹಿಮ್ಮಡಿಯ ಮೇಲೆ ನಿಂತು ಹಡಗಿನ ಕಟಕಟೆಯನ್ನು ಒರಗಿ ಶಾರ್ಕಿಗೆ ಕಾಯುತ್ತಿದ್ದೆವು. **ಸಚಕಿತನಯನಂ ಪಶ್ಯತಿ ತವ ಪನ್ಥಾನಂ**—ಸಚಕಿತ ನಯನರಾಗಿ ಅದರ ದಾರಿಯನ್ನೇ ನೋಡುತ್ತಿದ್ದೆವು. ತುಂಬಾ ಉತ್ಸಾಹದಿಂದ ಕಾಯುವವರಿಗೆ ಬರುವ ಗತಿಯೇ ನಮಗೂ ಆಯಿತು. "ಸಖಿ, ಶ್ಯಾಮ ಬರಲಿಲ್ಲ." ಆದರೆ ದುಃಖಕ್ಕೆಲ್ಲ ಒಂದು ಅಂತ್ಯವಿದೆ. ತಕ್ಷಣವೇ ಜಹಜಿಗೆ ನೂರು ಅಡಿ ದೂರದಲ್ಲಿ, ನೀರು ಹೊರುವವನ ಚರ್ಮದ ಚೀಲಕ್ಕಿಂತ ದೊಡ್ಡದಾದೊಂದು ಸಂಚರಿಸುವ ವಸ್ತು ನೀರಿನಲ್ಲಿ ಕಂಡಿತು. ತಕ್ಷಣವೇ "ಅದೇ ಶಾರ್ಕ್, ಸುಮ್ಮನೆ ಇರಿ ಮಕ್ಕಳೆ—ಇಲ್ಲದೆ ಇದ್ದರೆ ಶಾರ್ಕ್ ಓಡಿಹೋಗಬಹುದು." "ಯಾರು ಅಲ್ಲಿ! ನಿಮ್ಮ ಬಿಳಿ ಹ್ಯಾಟನ್ನು ಏತಕ್ಕೆ ಸ್ವಲ್ಪ ಹೊತ್ತು ತೆಗೆಯಬಾರದು – ಶಾರ್ಕಿಗೆ ನಾಚಿಕೆಯಾಗಬಹುದು!" ಈ ಧ್ವನಿ ಕೇಳಿಸುತ್ತಿದ್ದಾಗ ಆ ಲವಣ ಸಮುದ್ರದ ಭೀಮಮತ್ಸ್ಯ, ಗಾಳದ ಕೊನೆಯಲ್ಲಿರುವ ಮಾಂಸವನ್ನು ತನ್ನ ಉದರಾಗ್ನಿಯಲ್ಲಿ ಭಸ್ಮಮಾಡುವುದಕ್ಕೆ ಬಟ್ಟೆಯಿಂದ ಮುಚ್ಚಿದ ದೋಣಿಯಂತೆ ಹತ್ತಿರ ಬಂದಿತು. ಇನ್ನೇನು ಏಳೆಂಟು ಅಡಿ ಇದೆ ಗಾಳದ ಮಾಂಸ ಶಾರ್ಕಿಗೆ ಮುಟ್ಟಬೇಕಾದರೆ,

ಅದರ ಬೃಹತ್ ಬಾಲ ಸ್ವಲ್ಪ ಚಲಿಸಿತು. ನೇರವಾದ ಚಲನೆ ಸ್ವಲ್ಪ ವಕ್ರವಾಯಿತು. ಅಯ್ಯೋ ಶಾರ್ಕ್ ದೂರ ಸರಿಯಿತು! ಆದರೆ ಪುನಃ ಬಾಲ ಸ್ವಲ್ಪ ಅಲ್ಲಾಡಿತು. ಈ ಭೀಮಮತ್ಸ್ಯ ತಿರುಗಿ ಗಾಳದ ಹತ್ತಿರ ಬಂದಿತು. ಪುನಃ ಓಡುತ್ತಿರುವುದು. ಇನ್ನೇನು ಗಾಳವನ್ನು ನುಂಗುವುದರಲ್ಲಿದೆ! ಪುನಃ ಆ ಹಾಳು ಬಾಲ ಅಲ್ಲಾಡಿತು. ಶಾರ್ಕ್ ದೂರ ಸರಿಯಿತು. ಇನ್ನೊಂದು ಪ್ರದಕ್ಷಿಣೆ ಮಾಡಿ ಹತ್ತಿರ ಬರುತ್ತಿದೆ. ಗಾಳವನ್ನೇ ನೋಡುತ್ತಿದೆ. ಇನ್ನೇನು ಗಾಳವನ್ನು ನುಂಗಿತು. ಪಕ್ಕಕ್ಕೆ ಹೊರಳುತ್ತಿದೆ. ಹೌದು, ಗಾಳದ ಮಾಂಸವನ್ನು ನುಂಗಿತು. ಎಳೆಯಿರಿ, ಎಳೆಯಿರಿ, ನಲವತ್ತು ಐವತ್ತು ಜನ ಒಟ್ಟಿಗೆ ಎಳೆಯಿರಿ! ನೀರಿನಿಂದ ಮೇಲೆ ಬರುವುದರಲ್ಲಿದೆ. ನೀರಿನಲ್ಲೆ ಹೊರಳುತ್ತಿದೆ. ಎಳೆಯಿರಿ ಎಳೆಯಿರಿ! ಅಯ್ಯೋ ಗಾಳದಿಂದ ತಪ್ಪಿಸಿಕೊಂಡಿತು! ಶಾರ್ಕ್ ಓಡಿತು. ಎಂತಹ ಜನ ನೀವು! ಎಷ್ಟು ಆತುರ! ಅದಕ್ಕೆ ಸ್ವಲ್ಪವೂ ಸಮಯ ಕೊಡಬೇಡವೆ, ಗಾಳವನ್ನು ನುಂಗುವುದಕ್ಕೆ. ಅದು ಪಕ್ಕಕ್ಕೆ ಸರಿದೊಡನೆಯೆ ಎಳೆಯುವುದಕ್ಕೆ ಆತುರ! ಏನಾದರಾಗಲಿ ಆಗಿಹೋದುದನ್ನು ಕುರಿತು ಚಿಂತಿಸಿ ಫಲವಿಲ್ಲ. ಶಾರ್ಕ್ ಗಾಳದಿಂದ ಪಾರಾಗಿ ನೇರ ಓಡಿತು. ಅದು ಪೈಲೆಟ್ ಮೀನಿಗೆ ಏನಾದರೂ ಬುದ್ಧಿಯನ್ನು ಕಲಿಸಿತೊ ಗೊತ್ತಿಲ್ಲ. ಅಂತೂ ಶಾರ್ಕ್ ತಪ್ಪಿಸಿಕೊಂಡಿತು. ಅದು ಹುಲಿಯಂತಿತ್ತು. ಅದರ ಮೈ ಮೇಲೆಲ್ಲ ಹುಲಿಗೆ ಇರುವಂತೆ ಬಣ್ಣದ ಪಟ್ಟೆ. ಗಾಳದ ಅಪಾಯ ಸನ್ನಿವೇಶದಿಂದ ಪಾರಾಗುವುದಕ್ಕೆ ತನ್ನ ಅನುಯಾಯಿಗಳೊಂದಿಗೆ ಪರಾರಿಯಾಯಿತು.

ಹತಾಶರಾಗುತ್ತಿರುವ ಪ್ರಸಂಗ ಬರಲಿಲ್ಲ. ಹಿಂತಿರುಗುತ್ತಿರುವ ಶಾರ್ಕಿನ ಸಮೀಪದಲ್ಲೆ ಮತ್ತೊಂದು ದಪ್ಪ ತಲೆಯ ಶಾರ್ಕ್ ಬರುತ್ತಿದೆ. ಅಯ್ಯೋ ಪಾಪ, ಶಾರ್ಕ್‌ಗಳಿಗೆ ಭಾಷೆ ಇಲ್ಲ. ಇದ್ದಿದ್ದರೆ ಹಿಂತಿರುಗುತ್ತಿದ್ದ ಶಾರ್ಕ್, ಬರುವ ಶಾರ್ಕಿಗೆ, ಅಪಾಯದ ಸುಳಿವನ್ನು ಕೊಡುತ್ತಿತ್ತು. "ನೋಡು ಅಲ್ಲೊಂದು ಹೊಸ ಪ್ರಾಣಿ ಬಂದಿದೆ. ಅದರ ಮಾಂಸ ಬಹಳ ರುಚಿ. ಆದರೆ ಮೂಳೆ ಬಹಳ ಗಟ್ಟಿ, ಹಲವು ವರ್ಷಗಳಿಂದ ನಾನು ಶಾರ್ಕ್ ಆಗಿರುವೆನು. ಬದುಕಿರುವ, ಸತ್ತ, ಅರ್ಧಸತ್ತ, ಹಲವು ಪ್ರಾಣಿಗಳನ್ನು ನಾನು ನುಂಗಿರುವೆನು. ಮೂಳೆ, ಇಟ್ಟಿಗೆ, ಕಲ್ಲು, ಮರ ಎಷ್ಟನ್ನೋ ತಿಂದಿರುವೆನು. ಆದರೆ ಈ ಹೊಸ ಮೂಳೆಯನ್ನು ಅದರೊಂದಿಗೆ ಹೋಲಿಸಿದರೆ, ಹಿಂದೆ ತಿಂದಿದ್ದು ಬೆಣ್ಣೆಯಂತೆ. ನೋಡು ನನ್ನ ಹಲ್ಲಿಗೆ ಆದ ಪಾಡನ್ನು!" ಹೀಗೆ ಹೇಳುತ್ತ ದೇಹದ ಅರ್ಧದಷ್ಟು ಇರುವ ತನ್ನ ಭಯಂಕರ ದೊಡ್ಡ ದವಡೆಯನ್ನು ಅದಕ್ಕೆ ತೋರಿಸಬಹುದಾಗಿತ್ತು. ಮತ್ತೊಂದು ಶಾರ್ಕ್ ಕೂಡ ತನ್ನ ಅನುಭವಕ್ಕೆ ತಕ್ಕಂತೆ ಯಾವುದಾದರೂ ಔಷಧಿಯನ್ನು, ಅಂದರೆ ಒಂದು ಬಗೆಯ ಮೀನಿನ ಪಿತ್ತಕೋಶ, ಮತ್ತೊಂದರ ಪ್ಲೀಹ, ತಂಪಾಗಿರುವ ಸಮುದ್ರನಳ್ಳಿಯ ಸಾರು ಮುಂತಾದುವನ್ನು ಸೇವಿಸೆಂದು ಹೇಳಬಹುದಾಗಿತ್ತು. ಯಾವುದೂ ಜರಗದೇ ಇದ್ದುದರಿಂದ ಶಾರ್ಕ್‌ಗಳಿಗೆ ಭಾಷೆಯಿಲ್ಲವೆಂದಾಗಲೀ ಅಥವಾ ಇದ್ದರೆ ನೀರಿನಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲವೆಂದಾಗಲೀ ಊಹಿಸಬೇಕಾಗಿದೆ. ಶಾರ್ಕ್‌ಗೆ ಒಗ್ಗುವ ಯಾವುದಾದರೂ ಭಾಷೆಯನ್ನು ಹುಡುಕುವ ತನಕ ಅವು ಸುಮ್ಮನೆ ಇರಬೇಕಾಗಿದೆ. ಅಥವಾ ಅದು ಹೀಗೂ ಇರಬಹುದು: ಶಾರ್ಕ್ ಜನರೊಂದಿಗೆ ಬೆರೆತು ನಮ್ಮಂತೆ ಆಗಿ, ಸತ್ಯವನ್ನು ಮರೆಮಾಚಿ, ನಗುತ್ತ ನಾನೊಬ್ಬನೆ ಏಕೆ ಮೋಸ ಹೋಗಬೇಕೆಂದು ಭಾವಿಸಿ, "ಪೆದ್ದೆ, ನಿನಗೂ ಸರಿಯಾಗಿ ಆಗಲಿ" ಎಂದಿರಬಹುದು!

ಈಗ ಎಲ್ಲರೂ ಸುಮ್ಮನೆ ಇರಿ—ಅತ್ತ ಇತ್ತ ಚಲಿಸಬೇಡಿ. ಅವಸರಪಡಬೇಡಿ. ಹಗ್ಗದ ಹತ್ತಿರವೇ ಇರಿ. ಶಾರ್ಕ್ ಗಾಳದ ಹತ್ತಿರ ಸಂಚರಿಸುತ್ತಿದೆ. ಗಾಳವನ್ನು ತನ್ನ ದವಡೆಯಲ್ಲಿ ಇಟ್ಟುಕೊಂಡು ಪರೀಕ್ಷಿಸುತ್ತಿದೆ. ಆಗಲಿ ಪರೀಕ್ಷಿಸಲಿ. ಈಗ ಅದು ಒಂದು ಮಗ್ಗುಲಿಗೆ ತಿರುಗಿದೆ ನೋಡಿ! ಅದನ್ನು ಪೂರ್ತಿ ನುಂಗುತ್ತಿದೆ. ಸುಮ್ಮನೆ ಇರಿ. ನುಂಗುವುದಕ್ಕೆ ಸಮಯ ಕೊಡಿ. ಶಾರ್ಕ್ ಒಂದು ಪಕ್ಕಕ್ಕೆ ತಿರುಗಿ ಗಾಳವನ್ನು ಚೆನ್ನಾಗಿ ವಿರಾಮದಲ್ಲಿ ನುಂಗಿ ಹಿಂತಿರುಗುವುದರಲ್ಲಿತ್ತು. ಆದರೆ ತಕ್ಷಣವೇ ಹಿಂದಿನಿಂದ ಎಳೆತ ಬಂತು. ಶಾರ್ಕಿಗೆ ಆಶ್ಚರ್ಯವಾಗಿ ಗಾಳವನ್ನು ಹೊರಗೆ ಎಸೆಯಲು ಪ್ರಯತ್ನಿಸಿತು. ಆದರೆ ಇನ್ನೂ ದುರಂತಕ್ಕೆ ಇಟ್ಟುಕೊಂಡಿತು. ಗಾಳ ಅದನ್ನು ಚೆನ್ನಾಗಿ ನಾಟಿತು. ಮೇಲಿನಿಂದ ಹುಡುಗರು ಮಕ್ಕಳು ಎಲ್ಲ ಸೇರಿ ಹಗ್ಗವನ್ನು ಎಳೆಯಲು ಉಪಕ್ರಮಿಸಿದರು. ನೋಡಿ ಶಾರ್ಕಿನ ತಲೆ ನೀರ ಮೇಲೆ ಇದೆ. ಅಬ್ಬ! ಎಂತಹ ಭಯಂಕರ ದವಡೆ. ದೇಹವೆಲ್ಲ ದವಡೆ ಮತ್ತು ಗಂಟಲಿನಂತೆ ತೋರುವುದು. ಎಳೆಯಿರಿ. ಪೂರ್ತಿ ನೀರಿನಿಂದ ಮೇಲೆ ಬಂತು. ಗಾಳ ದವಡೆಗೆ ಚೆನ್ನಾಗಿ ನಾಟಿದೆ. ಈಗ ಎಳೆಯಿರಿ, ಸಹೋದರರೆ, ಹೋ, ಇದೊಂದು ರಕ್ತದ ಚಿಲುಮೆ; ಈಗ ಬಟ್ಟೆಯನ್ನು ರಕ್ಷಿಸಿ ಪ್ರಯೋಜನವಿಲ್ಲ, ಎಳೆಯಿರಿ, ಇನ್ನೇನು ಸಿಕ್ಕುವುದರಲ್ಲಿದೆ. ಈಗ ಅದನ್ನು ಡೆಕ್ಕಿನ ಮೇಲೆ ಉರುಳಿಸಿ. ಜೋಪಾನ; ಈಗ ಹಗ್ಗವನ್ನು ಸಡಿಲ ಬಿಡಿ. ಅಬ್ಬ! ಸದ್ಯಕ್ಕೆ ಕೊನೆಗೊಂಡಿತು. ಎಷ್ಟು ದೊಡ್ಡ ಶಾರ್ಕ್, ಅಬ್ಬಾ! ಅದು ಎಂತಹ ಶಬ್ದದಿಂದ ಹಡಗಿನ ಮೇಲೆ ಬಿತ್ತು! ಎಷ್ಟು ಜಾಗ್ರತೆಯಿಂದ ಇದ್ದರೂ ಸಾಲದು. ಆ ಸಲಾಕಿಯಿಂದ ತಲೆಗೆ ಹೊಡೆಯಿರಿ. ಅಯ್ಯಾ, ಸಿಪಾಯಿ, ನೀನು ಮಿಲಿಟರಿಯವನು. ಅವನ ಬಟ್ಟೆ ಮತ್ತು ದೇಹವೆಲ್ಲ ಶಾರ್ಕಿನ ರಕ್ತದಿಂದ ತೊಯ್ದುಹೋಗಿತ್ತು. ಅದರ ತಲೆಯ ಮೇಲೆ ಬಲವಾಗಿ ಏಟುಗಳನ್ನು ಹಾಕುತ್ತಾ ಹೋದನು. ಹೆಂಗಸರು, "ಅಯ್ಯೋ ಪಾಪ: ಎಷ್ಟು ನಿರ್ದಯ! ಕೊಲ್ಲಬೇಡಿ!" ಎಂದು ಅರಚುತ್ತ ಇದ್ದರೂ ಅದನ್ನು ನೋಡುವುದನ್ನು ಮಾತ್ರ ಬಿಡಲಿಲ್ಲ. ಆ ಭಯಂಕರ ದೃಶ್ಯ ಇಲ್ಲಿಗೇ ಕೊನೆಗಾಣಲಿಲ್ಲ. ಅದರ ಹೊಟ್ಟೆಯನ್ನು ಹೇಗೆ ಸೀಳಿದರು, ರಕ್ತಪ್ರವಾಹ ಹೇಗೆ ಹರಿಯಿತು! ಅದರ ಕರುಳು ಮತ್ತು ಹೃದಯವನ್ನು ತೆಗೆದಾದ ಮೇಲೂ ಆ ರಾಕ್ಷಸ ಎಷ್ಟು ಹೊತ್ತು ಒದ್ದಾಡುತ್ತಿದ್ದಿತು! ಅದರ ಹೊಟ್ಟೆಯಿಂದ ಮೂಳೆ, ಚರ್ಮ, ಮಾಂಸ, ಮರದ ರಾಶಿ ಹೇಗೆ ಬಂತು ! ಇದೆಲ್ಲ ಹೋಗಲಿ. ಅವತ್ತು ನಾನು ಊಟ ಮಾಡಲು ಆಗಲಿಲ್ಲ ಎಂದು ಹೇಳಿದರೆ ಸಾಕಾಗಿದೆ. ಎಲ್ಲ ಶಾರ್ಕಿನ ವಾಸನೆಮಯ. (ಪರಿವ್ರಾಜಕ ದಿಂದ)